ಮಾನವೀಯ ಮಿಡಿತವೇ ಕಾರಣವಾಗಿ... ತಮ್ಮ ಸಲುವಾಗಿ ತನ್ನ ಬದುಕನ್ನು ಆ ರೆಸಾರ್ಟಿನ ಮಬ್ಬುಗತ್ತಲಿನ ಹಾದಿಯಲ್ಲಿ ಚೆಲ್ಲಾಡಿಕೊಂಡುಬಿಟ್ಟನಲ್ಲ! ಚೆಲ್ಲಾಡಿದ ಎಡೆಯಿಂದಲೇ ಆತ ಎತ್ತರೆತ್ತರ ಬೆಳೆಯುತ್ತಾ ಹೋದ ಭಾವ! ಅವನೇನಾಗಬೇಕಿತ್ತು ಅವರಿಗೆ?! ಅವರು ಅಪರಿಚಿತ ಹಾದಿಹೋಕರಷ್ಟೆ! ಸಂಬಂಧಪಟ್ಟವರೇ ವಾಸ್ತವದ ಅರಿವಿನಲ್ಲಿ ಮೌನವಾಗಿ ಅಲ್ಲಿಂದ ಓಡಿಹೋಗುತ್ತಿರುವಾಗ... ಆತ ನಿಂತು ನಾಲ್ಕು ಮಾತನಾಡಿದ್ದನಲ್ಲ... ಅದಕ್ಕೆ ಸಿಕ್ಕ ಪ್ರತಿಫಲ... ಹಾದಿಯ ಹೆಣವಾಗುವುದು... ಒಂದಿಷ್ಟೇ ಇಷ್ಟು ಮನುಷ್ಯತ್ವ, ಧೈರ್ಯ ತೋರಿದ್ದರೆ ಅವನು ಬದುಕಬಹುದಿತ್ತಲ್ಲ! ಅವನ ಮನುಷ್ಯತ್ವ ತಮ್ಮನ್ನು ಬದುಕಿಸಿತ್ತು. ತಮ್ಮ ಅಮಾನುಷತ್ವ ಅವನನ್ನು ಬಲಿ ತೆಗೆದುಕೊಂಡುಬಿಟ್ಟಿತು.

ಗಂಡಹೆಂಡತಿಯರ ನಡುವೆ ಆ ಅಪರಿಚಿತ ಒಂದು ದೊಡ್ಡ ಪರ್ವತವಾಗಿ ಬೆಳೆಯುತ್ತಾ ಹೋಗಿದ್ದ. ಅವಳ ಮೌನವನ್ನು ಇವನಿಗೆ ಕಳೆಯಲಾಗಿರಲಿಲ್ಲ. ಇವನ ಕುಬ್ಜತೆಯನ್ನು ಅವಳು ಒಪ್ಪಿಕೊಳ್ಳಲು ಸಾಧ್ಯವಾಗಿರಲಿಲ್ಲ.

★★★

ತಿಂಗಳುಗಳು ಉರುಳಿದ್ದವು. ಹುಂಬತನ ದೂರ ಇಟ್ಟು ಅವನು ಅವಳನ್ನು ಅನುನಯದಿಂದ ಓಲೈಸಲಾರಂಭಿಸಿದ್ದ. ಇವಳೂ ಮೇಲುನೋಟಕ್ಕೆ ಸಮಾಧಾನಗೊಳ್ಳುತ್ತಿರುವಂತೆಯೇ ಕಾಣಿಸಿಕೊಂಡಿದ್ದಳು. ಸದ್ಯ ಇಷ್ಟಕ್ಕೇ ಮುಗಿಯಿತಲ್ಲ. ಗೆದ್ದೆನೆಂದುಕೊಂಡನಾತ! ಎದಿರುಬದಿರು ಕೂತು ಇಬ್ಬರೂ ಮಾತನಾಡುವಷ್ಟು, ಸಂಬಂಧ ಸರಿ ಹೋಗಿತ್ತು. ಅಂಥದ್ದೇ ಒಂದು ರಾತ್ರಿ... ಏಕಾಂತದಲ್ಲಿರುವಾಗ ಇಬ್ಬರೂ ಮಾತನಾಡುತ್ತಿದ್ದರು. ಆ ದಿನ... ಮಬ್ಬುಗತ್ತಲಿನ ಹಾದಿ... ಹುಚ್ಚೆದ್ದ ಕುದುರೆಗಳು... ದೇವದೂತನಂತೆ ಬಂದ ಆ ಅಪರಿಚಿತ... ತಮ್ಮಿಬ್ಬರ ಮಾನ ಪ್ರಾಣ ಉಳಿಸಿ... ಪ್ರಾಣಬಿಟ್ಟವ...

ಅವನಿಗೆ ಆ ಮಾತುಗಳು, ಆ ನೆನಪುಗಳು ಏನೇನೂ ಇಷ್ಟವಿಲ್ಲದ್ದೇ ಹೌದು. ಮೈಯೆಲ್ಲ ಉರಿಯುತ್ತಿದ್ದರೂ ಮೌನ ಮುರಿದ ಅವಳ ಪ್ರೀತ್ಯರ್ಥವಾಗಿ ತಣ್ಣಗಿನ "ಹ್ಞಾಂ ಹ್ಞೂಂ"ಗಳಲ್ಲಿ ಅನ್ಯಮನಸ್ಕನಂತೆ ಕೇಳುತ್ತಲೇ ಹೋಗಿದ್ದು. ಆ ಕ್ಷಣ... ಅವಳಾಡುತ್ತಿದ್ದ ಮಾತುಗಳಲ್ಲಿ ಎಂಥದ್ದೋ ಒಂದು ವಿಲಕ್ಷಣತೆಯಿದೆ ಎಂಬ ಭಾವ ಅವನನ್ನು ಆವರಿಸಿಕೊಂಡಿತ್ತು. ತಲೆಯನ್ನು ಕೊಡವಿ ಪೂರ್ಣಮನಸ್ಕನಾಗಿ ಅವನು ಅವಳತ್ತ ನೋಡಿದ್ದ; "ಏನಂದಿದ್ದು ನೀನು?" ಅವಳು ಯಾವ ಅಸ್ಪಷ್ಟತೆಯೂ ಇಲ್ಲದೆ ಖಚಿತವಾಗಿ ತಾನು ಆಡಿದ್ದ ಮಾತುಗಳನ್ನು ಮತ್ತೆ ಪುನರಾವರ್ತಿಸಿದ್ದಳು: "ಒಂದು ದಿನ ನಾನವನ ಹೆಸರಿನಲ್ಲಿ ವಿಧವೆಯಾಗುತ್ತೇನೆ." ಅವಳಾಡಿದ ಮಾತುಗಳ ಅರ್ಥ ಆಗುತ್ತಾ ಹೋದಂತೆ ಅವನ ಇಡೀ ಮೈ...


## ಎಂ.ಎಸ್. ವೇದಾ

ಕವಿತೆ, ಕತೆ, ಕಾದಂಬರಿ, ನಾಟಕಗಳು ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಬರೆದಿರುವ ವೇದಾ ಪ್ರಯೋಗಶೀಲ ಲೇಖಕಿ. ಲೇಖಕ ಬಿ. ಪುಟ್ಟಸ್ವಾಮಯ್ಯ ಅವರ ನಾಟಕ ಹಾಗೂ ಕಾದಂಬರಿಗಳ ಕುರಿತು ಪಿಎಚ್.ಡಿ. ಮಾಡಿದ್ದಾರೆ. 'ಪ್ರೀತಿ ಮತ್ತು ಸಾವು', 'ಪಾಲು', 'ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ', 'ಮುಳ್ಳ ಮನೆಯ ಮೇಲೆ' ಅವರ ಕಥಾಸಂಕಲನಗಳು. 'ಜಮೀನು', 'ಜಯ', 'ಕಪ್ಪು ಕಿವಿಯ ಬಿಳಿಯ ಕುದುರೆಗಳು', 'ರಾಜ ಒಡೆಯರ್' ಕಾದಂಬರಿಗಳು. 'ಕಾವ್ಯಕೂಸು', 'ಗಂಗೋತ್ರಿಯಲ್ಲಿ', 'ಬಿಳಲುಗಳು', 'ದಾಖಲಾಗುವುದು ಬೇಡ' ಕವಿತೆಗಳ ಸಂಕಲನಗಳನ್ನು ಮತ್ತು 'ಉತ್ತರ ಶಾಕುಂತಲಾ' ನಾಟಕವನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕಿ.